ಓ ಎಸ್ ನಂ.**383/2021**
ಪಿ ಡಬ್ಲ್ಯೂ-**1**

ದಿನಾಂಕ **10-06-2026** ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿ ಪರವಾಗಿ ಶ್ರೀ. ಜಿ ಎಸ್ ಎಸ್ ವಕೀಲರವರಿಂದ**

1. ದಾವಾ ಆಸ್ತಿಗಳ ನಂಬರ್ ಗಳನ್ನು ನನಗೆ ಹೇಳಲು ಬರುವುದಿಲ್ಲ. ಈ ದಾವೆಯಲ್ಲಿ ಇರುವ ಹೊಲಗಳು ಎರಡು ಇರುತ್ತವೆ. ಒಂದು ಮನೆ ಇದೆ. ಒಂದನೇ ಪ್ರತಿವಾದಿಯು ನನ್ನ ತಾಯಿ. ಅವರು ತೀರಿಕೊಂಡಿರುತ್ತಾರೆ. ಅವರು ತೀರಿಕೊಂಡು ನಾಲ್ಕು ವರ್ಷಗಳು ಆಗಿರುತ್ತವೆ. ನನ್ನ ತಂದೆಯವರು ತೀರಿಕೊಂಡು 20 ವರ್ಷಗಳು ಆಗಿರುತ್ತವೆ. ದಾವಾ ಆಸ್ತಿಗಳು ನನ್ನ ತಂದೆಯವರಿಗೆ ಸಂಬಂಧ ಪಟ್ಟ ಆಸ್ತಿಗಳು ಆಗಿರುತ್ತವೆ ಎಂದರೆ ಸರಿ. ನನ್ನ ತಂದೆಯವರು ಇದ್ದಾಗ ನಾನು ಹಿಸ್ಸಾ ಕೊಡಲು ನಾನು ಕೇಳಿರುವುದಿಲ್ಲ, ಈಗ ಕೇಳಿರುತ್ತೇನೆ. ನನ್ನ ತಂದೆಯವರು ತೀರಿಕೊಂಡ ನಂತರ ನನ್ನ ತಾಯಿಗೆ ನನ್ನ ಹಿಸ್ಸಾ ಕೊಡಲು ಕೇಳಿದ್ದೆನು. ನನ್ನ ತಂದೆ ತೀರಿಕೊಂಡ ನಂತರ ಐದು ವರ್ಷದ ಹಿಂದೆ ನನ್ನ ಹಿಸ್ಸಾ ಕೊಡಲು ಕೇಳಿದ್ದೆನು.

2. ಎರಡನೇ ಪ್ರತಿವಾದಿ ನನ್ನ ಅಕ್ಕ. ನಾಲ್ಕನೇ ಪ್ರತಿವಾದಿ ಮಹಾದೇವಿ ನನ್ನ ತಂಗಿ. ಮೂರನೇ ಪ್ರತಿವಾದಿ ನನ್ನ ಅಣ್ಣ. ಐದನೇ ಪ್ರತಿವಾದಿ ನನ್ನ ತಮ್ಮ. ಈ ದಾವೆಯನ್ನು ಹಾಕುವ ಪೂರ್ವದಲ್ಲಿ ನನ್ನ ಹಿಸ್ಸಾ ಕೊಡಿ ಎಂದು ಹೇಳಿ ನಾನು ಪ್ರತಿವಾದಿಯರಿಗೆ ನೋಟಿಸನ್ನು ಕೊಟ್ಟಿರುವುದಿಲ್ಲ. ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ನಾನು ಹಾಜರು ಪಡಿಸಿರುವುದಿಲ್ಲ. ವಾರ್ಸಾ ಪ್ರಮಾಣ ಪತ್ರವನ್ನು ನಾನು ಹಾಜರು ಪಡಿಸಿರುತ್ತೇನೆ. ವಾರ್ಸಾ ಪ್ರಮಾಣ ಪತ್ರವನ್ನು ನಾನು ಹಾಜರು ಪಡಿಸುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆಯ ಆಸ್ತಿಯನ್ನು ಈ ದಾವೆಯಲ್ಲಿ ನಾನು ಸೇರಿಸಿರುವುದಿಲ್ಲ. ಮನೆಗೆ ಸಂಬಂಧ ಪಟ್ಟ ಉತಾರವನ್ನು ನಾನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಇವತ್ತಿಗೂ ಜಮೀನುಗಳು ನನ್ನ ತಂದೆಯ ಹೆಸರಿನಲ್ಲಿ ಇರುತ್ತವೆ. ಈಗ ಎಲ್ಲರ ಹೆಸರುಗಳು ಉತಾರದಲ್ಲಿ ಇರುತ್ತವೆ. ಎಲ್ಲರ

ಹೆಸರು ಇರುವ ಉತಾರಗಳನ್ನು ನಾನು ಈ ದಾವೆಯಲ್ಲಿ ಹಾಜರು ಪಡಿಸಿರುತ್ತೇನೆ. ಹಾಗೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಜಮೀನಿನ ಕಿಮ್ಮತ್ತು ಎಷ್ಟು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಶಿವಳ್ಳಿ ಗ್ರಾಮದಲ್ಲಿ 01 ಎಕರೆಗೆ 30 ಲಕ್ಷ ರೂಪಾಯಿಯಷ್ಟು ಕಿಮ್ಮತ್ತು ಇರುತ್ತದೆ ಎಂದರೆ ಸರಿ. ನಮ್ಮ ಮನೆಯ ಕಿಮ್ಮತ್ತು 5 ಲಕ್ಷ ರೂಪಾಯಿ ಆಗುತ್ತೆ ಎಂದರೆ ನನಗೆ ಗೊತ್ತಾಗುವುದಿಲ್ಲ. ಹೊಲ ಮನೆಯ ಕಿಮ್ಮತ್ತು 60 ಲಕ್ಷ ರೂಪಾಯಿ ಆಗುತ್ತದೆ ಎಂದರೆ 01 ಎಕರೆಗೆ 50 ಲಕ್ಷ ರೂಪಾಯಿ ಜಮೀನುಗಳು ಮಾರಾಟ ಆಗುತ್ತಿವೆ. ನನ್ನ ಹಿಸ್ಸಾಗೆ 02 ಎಕರೆ 08 ಗುಂಟೆ ಜಮೀನು ಬರುತ್ತದೆ. ನನ್ನ ತಂದೆಯವರು ಇದ್ದಾಗ ನನ್ನ ಲಗ್ನ ಆಗಿರುತ್ತದೆ. ನನ್ನ ಮದುವೆಯ ಖರ್ಚು ವೆಚ್ಚಗಳನ್ನು ನನ್ನ ತಂದೆಯವರೇ ನೋಡಿಕೊಂಡಿರುತ್ತಾರೆ. ದಾವಾ ಆಸ್ತಿಯ ಮೌಲ್ಯವು ಹೆಚ್ಚಾಗಿರುವುದರಿಂದ ಈ ದಾವೆಯು ಈ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.